ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: Presiding Officer Conference

ಪತ್ರಿಕೆಯ ಹೆಸರು : NAME OF THE NEWS PAPER: ಆಂದೋಲನ ದಿನಪತ್ರಿಕೆ ದಿನಾಂಕ : DATE : 20/12/19

# ಪಕ್ಷಾಂತರ ನಿಷೇಧ ಕಾಯಿದೆ ಅಧ್ಯಯನಕ್ಕೆ ಸ್ಪೀಕರ್‌ಗಳ ಸಮಿತಿ ರಚಿಸಿದ ಓಂ ಬಿರ್ಲಾ



**ಡೆಹ್ರಾಡೂನ್:** ಪಕ್ಷಾಂತರ ನಿಷೇಧ ಕಾಯಿದೆ ಕುರಿತು ಮೌಲ್ಯಮಾಪನ ನಡೆಸಲು ವಿಧಾನಸಭೆ ಸ್ಪೀಕರ್‌ಗಳ ಸಮಿತಿ ರಚಿಸುವುದಾಗಿ ಲೋಕಸಭಾಧ್ಯಕ್ಷ ಓಂ ಬಿರ್ಲಾ ಹೇಳಿದ್ದಾರೆ.

ಡೆಹ್ರಾಡೂನ್‌ನಲ್ಲಿ ನಡೆದ ವಿಧಾನಸಭಾಧ್ಯಕ್ಷರ ಎರಡು ದಿನಗಳ ಸಮ್ಮೇಳನದ ಬಳಿಕ ಸುದ್ದಿಸಂಸ್ಥೆ ಜತೆ ಮಾತನಾಡಿದ ಅವರು, ''ಪಕ್ಷಾಂತರ ನಿಷೇಧ ಕಾಯಿದೆ ಹಾಗೂ ಪಕ್ಷಾಂತರ ಕುರಿತಾದ ಸಂವಿಧಾನದ 10ನೇ ಪರಿಚ್ಛೇದಕ್ಕೆ ಸಂಬಂಧಿಸಿ ಸಮ್ಮೇಳನದಲ್ಲಿ ವಿವರವಾದ ಚರ್ಚೆ ನಡೆಯಿತು. ಸ್ಪೀಕರ್‌ಗಳ ಸಮಿತಿಯು ಪಕ್ಷಾಂತರ ನಿಷೇಧ ಕಾಯಿದೆ ಕುರಿತು ಸಮಗ್ರ ಅಧ್ಯಯನ ನಡೆಸಿ ವರದಿ ನೀಡಲಿದೆ,'' ಎಂದು ತಿಳಿಸಿದರು.

ಇದಕ್ಕೂ ಮುನ್ನ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಬಿರ್ಲಾ ಅವರು, ''ಪಕ್ಷಾಂತರ ವಿಚಾರದಲ್ಲಿ ಸ್ಪೀಕರ್‌ಗಳು ತಟಸ್ಥವಾಗಿದ್ದು ನಿಷ್ಪಕ್ಷಪಾತದಿಂದ ನಿರ್ದಿಷ್ಟ ಕಾಲಮಿತಿಯಲ್ಲಿ ನಿರ್ಣಯ ತೆಗೆದುಕೊಳ್ಳಬೇಕು. ಸ್ಪೀಕರ್‌ಗಳ ನಿರ್ಧಾರ ಹೇಗಿರಬೇಕು ಎಂದರೆ ನ್ಯಾಯಾಂಗ ಸೇರಿದಂತೆ ಯಾರೊಬ್ಬರೂ ಆ ನಿರ್ಣಯವನ್ನು ಪ್ರಶ್ನೆ ಮಾಡುವಂತಿರಬಾರದು,'' ಎಂದು ಹೇಳಿದರು.

ಕರ್ನಾಟಕದಲ್ಲಿ 17 ಶಾಸಕರ ಅನರ್ಹತೆ ವಿಚಾರಣೆ ಸಂದರ್ಭದಲ್ಲಿ, ''ಸ್ಪೀಕರ್‌ಗಳು ತಟಸ್ಥ ಧೋರಣೆ ಹೊಂದಿರಬೇಕು ಎಂಬ ಸಂವಿಧಾನ ಸಿದ್ಧಾಂತಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಟ್ರೆಂಡ್ ಹೆಚ್ಚುತ್ತಿದೆ,'' ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಅದನ್ನು ಪರೋಕ್ಷವಾಗಿ ಪ್ರಸ್ತಾಪಿಸಿದ ಓಂ ಬಿರ್ಲಾ, ''ಸುಪ್ರೀಂ ಕೋರ್ಟ್ ಸ್ಪೀಕರ್‌ಗಳ ತೀರ್ಮಾನ ಪ್ರಶ್ನಿಸಲು ತೊಡಗಿದರೆ ಹಾಗೂ ಆ ಕುರಿತು ಅಭಿಪ್ರಾಯ ವ್ಯಕ್ತಪಡಿಸಲು ಮುಂದಾದರೆ ಖಂಡಿತವಾಗಿಯೂ ಅದು ನಾವೆಲ್ಲ ಕಳವಳಪಡಬೇಕಾದ ಸಂಗತಿ,'' ಎಂದು ಹೇಳಿದರು.